ವೆಂಕಜ್ಜಿಗೆ ತನ್ನ ಗಂಡ ತೀರಿ ಹೋದದ್ದು ಯಾವ ವರ್ಷವೆಂದು ಕೇಳಿದರೆ ಹೇಳಲು ಬರದು. ಆದರೆ ಆ ವರ್ಷ 'ಅಮ್ಮ' ಬಂದು ಊರಲ್ಲಿ ಜನಗಳೆಲ್ಲ ನೊಣಗಳಂತೆ ಸತ್ತದ್ದು ನೆನಪಿದೆ. ಅದೇ ಕಾಯಿಲೆಯಲ್ಲಿ ಮುಟ್ಟಿದರೆ ಸುಡುವಷ್ಟು ಜ್ವರ ಬಂದು ಮಲಗಿದ್ದ ಗಂಡ ತಾನು ಮತ್ತು ಅತ್ತೆ ಇಬ್ಬರೂ ಸೇರಿ ಒತ್ತಾಯ ಮಾಡಿದರೂ ಗಂಟಲಿನಲ್ಲಿ ಇಳಿಯದ ಗಂಜಿಯನ್ನು ಕುಡಿಯಲು ನಿರಾಕರಿಸುತ್ತ ನರಳುತ್ತಿದ್ದವ ಮಾರನೆಯ ದಿನ ಬೆಳಿಗ್ಗೆ ಕೊರಡಾಗಿದ್ದದ್ದು ನೆನಪಿದೆ. ಹೆಣ ಹೊರಲೂ ಜನವಿರಲಿಲ್ಲ. ಸುಡಲಿಕ್ಕೆ ಬೇಕಾದ ಸೌದೆಗಾಗಿ ಮರ ಕಡಿಯುವವರಂತೂ ಇಲ್ಲವೇ ಇಲ್ಲ. ಎಲ್ಲರ ಮನೆಯಲ್ಲೂ ಇದೇ ಹಾಡು. ಒಂದು ಮನೆಯಲ್ಲಿ ಅಪ್ಪ. ಇನ್ನೊಂದರಲ್ಲಿ ಮಗ. ಮಗದೊಂದರಲ್ಲಿ ಸೊಸೆ. ಯಾರ ಮನೆಗೆ ಹೆಣ ಹೊರಲು ಯಾರು ಹೋಗುವುದು? ಯಾರನ್ನು ಸುಡಲು ಯಾರು ಸೌದೆ ಕಡಿಯುವುದು. ಅಂತೂ ಅತ್ತೆ ಸೊಸೆ ಯಾರು ಯಾರನ್ನೋ ಕಾಡಿ ಬೇಡಿ ಮನೆಯ ಹಿಂದಿನ ಹಾಡಿಯಲ್ಲೇ ಗಂಡನನ್ನು ಸುಟ್ಟಿದ್ದರು. ಇತ್ತೀಚಿನವರೆಗೆ ವೆಂಕಜ್ಜಿ ಆ ಹಿಂದಿನ ಹಾಡಿಗೆ ಒಬ್ಬಳೇ ಹೋಗಲು ಹೆದರುತ್ತಿದ್ದಿತ್ತು. ರಾತ್ರಿಯಲ್ಲಂತೂ ಕೇಳುವುದೇ ಬೇಡ. ಅತ್ತ ತಲೆ ಹಾಕಿ ಮಲಗುತ್ತಲೂ ಇರಲಿಲ್ಲ. ಪ್ರಾಯದ ಕಾಲದಲ್ಲಿ ಸತ್ತ ಗಂಡನ ಆತ್ಮ ಅತೃಪ್ತವಾಗಿ ತಿರುಗುತ್ತಿರಬಹುದೆಂದು ಬದುಕಿ ಉಳಿದವರು ಹೇಳಿದ ಮಾತು ಆಕೆಯ ಮನಸ್ಸಿನಲ್ಲಿ ನಾಟಿತ್ತು.

ಅವ ಸಾಯುವಾಗ ಮದುವೆಯಾಗಿ ವರ್ಷವೂ ಆಗಿರಲಿಲ್ಲ. ಸುತ್ತ ಮುತ್ತ ಅಮ್ಮನಿಲ್ಲದಿದ್ದಾಗ ಆ ಗಂಡನಿಗೆ ವೆಂಕಿಯಾಗುತ್ತಿದ್ದ ಈ ವೆಂಕಜ್ಜಿ ಬೇರೆಯವರಿಗೆ ವೆಂಕಮ್ಮನಾಗಿದ್ದಳು. ಹೊಟ್ಟೆಯಲ್ಲೊಂದು ಕೂಸು ಹೊರೆದದ್ದು ಖಾತ್ರಿಯಾಗಿ ತಿಂಗಳೆರಡು ತಿಂಗಳು ಕಳೆದಿರಬಹುದು. ಆಗಲೇ ಆ ಮಾರಿ ಗಂಡನನ್ನು ನುಂಗಿದ್ದು. ಅವನ ಬದಲು ತನ್ನನ್ನಾದರೂ ನುಂಗಬಾರದಿತ್ತೇ ಎಂದು ಆ ಅತ್ತೆಯೂ ಈ ಸೊಸೆಯೂ ಕಣ್ಣೀರು ಸುರಿಸಿದ್ದು ಎಷ್ಟೋ. ಬಾಳಿ ಬದುಕಬೇಕಾಗಿದ್ದ ಮಗನೇ ಬೇಕಾಯ್ತಾ ನಿನಗೆ. ಈ ಪಾಪದ ಹೆಣ್ಣನ್ನು ನಡು ನೀರಿನಲ್ಲಿ ಬಿಟ್ಟು ಹೋದನಲ್ಲ. ನಾನೆಷ್ಟು ದಿನ ಇನ್ನು. ಒಂದು ದಿನ ಈ ಮರ ಬಿದ್ದು ಹೋದ ಮೇಲೆ ಇವಳನ್ನು ಯಾರು ನೋಡಿಕೊಳ್ಳುವವರು ಎಂದು ಅತ್ತದ್ದೇ ಅತ್ತದ್ದು. ಯಾರು ಎಷ್ಟೇ ಅತ್ತರೂ ಸತ್ತವರೇನೂ ತಿರುಗಿ ಬರುವುದಿಲ್ಲವಲ್ಲ. ಹಾಗೆಯೇ ಇದ್ದವರೂ ಸಾಯುವುದಿಲ್ಲವಲ್ಲ. ಬದುಕಬೇಕು. ಅಲ್ಲ ಬದುಕುತ್ತಾರೆ. ಸುರು ಸುರುವಿನಲ್ಲಿ ಸತ್ತವರಿಗಾಗಿ ನೆನಪಾದಾಗಲೆಲ್ಲ ಕಣ್ಣೀರು ಹಾಕುತ್ತಾರೆ. ದಿನ ಕಳೆದಂತೆ ಬದುಕಿನ ಧಾವಂತ ದುಃಖವನ್ನು ಮರೆಸುತ್ತದೆ. ತಮ್ಮ ತಮ್ಮ ಬದುಕೇ ಮುಖ್ಯವಾದಾಗ ಸತ್ತವನನ್ನು ಮರೆಯುತ್ತಾರೆ. ವೆಂಕಜ್ಜಿಯ ವಿಷಯದಲ್ಲೂ ನಡೆದದ್ದು ಇದೇ. ಆ ದುಃಖದಲ್ಲೂ ಸತ್ತ ಜೀವದ ಬದಲಿಗೆ ಹೊಸತೊಂದು ಜೀವ ಬರುತ್ತದೆಂದು ಸಂಭ್ರಮಿಸಿದ್ದೂ ಇತ್ತು. ಮಗು ಬಸಿರಿನಲ್ಲಿಯೇ ಒದೆಯುವಾಗ, ಮತ್ತೆ ಹುಟ್ಟಿದಾಗ, ಮುಂದೆ ಬೆಳೆಯುವಾಗ ಅದರಪ್ಪ ಇದ್ದಿದ್ದರೆ ಅದರ ಮಜವೇ ಬೇರೆ ಇರುತ್ತಿತ್ತಲ್ಲವೇ ಎಂದು ಊರ ಎಲಿಮೆಂಟರಿ ಶಾಲೆಯ ಮೆಟ್ಟಲನ್ನೂ ಹತ್ತದ ಆ ವೆಂಕಮ್ಮನ ಮನಸ್ಸಿಗೆ ಬಂದದ್ದೂ ಇತ್ತು.

ಹುಟ್ಟಿದ ಮಗು ಗಂಡು. ಇಂತಹುದೇ ಆಗಬೇಕು ಎನ್ನುವ ಬಯಕೆಯಿಲ್ಲದಿದ್ದರೂ ಹೆಣ್ಣಾಗಿದ್ದರೆ ಹೊರಬೇಕಾಗಿದ್ದ ಜವಾಬ್ದಾರಿ ಇಲ್ಲವಲ್ಲ ಎಂದು ಒಂದು ಕ್ಷಣಕ್ಕೆ ನಿರಾಳವಾದರೂ ಅತ್ತೆ ಹೇಳುತ್ತಿದ್ದ 'ಈ ಮನೆಯಲ್ಲಿ ಗಂಡು ಸಂತಾನಕ್ಕೆ ಆಯುಷ್ಯ ಇಲ್ಲ ಮಗಳೇ' ಎಂದದ್ದು ನೆನಪಾಗಿ ಭಯಪಟ್ಟಿದ್ದಳು. ಅದೇ ಅತ್ತೆ ಹೇಳಿದ್ದರು 'ನೋಡು ನಾನೂ ನಿನ್ನ ಗಂಡನನ್ನು ಹೆರುವಾಗ ವಿಧವೆಯೇ. ಹೊಟ್ಟೆ ನೋವಿನಿಂದ ನರಳುತ್ತಿರುವ ನನ್ನನ್ನು ನೋಡಲಾರದೇ ಅತ್ತೆ ಬೇಡ ಬೇಡ ಎನ್ನುತ್ತಿದ್ದರೂ ಆ ನಡು ರಾತ್ರಿಯಲ್ಲಿ ಎರಡು ಮೈಲಿ ನಡೆದು ಸೂಲಗಿತ್ತಿಯನ್ನು ಕರೆದುಕೊಂಡು ಬರುತ್ತೇನೆಂದು ಹೋದ ಅವರು ಬಂದದ್ದು ಹೆಣವಾಗಿ. ಅದೂ ಬೆಳಗಾದ ಮೇಲೆ ದಾರಿಯ ಮೇಲೆ ಬಿದ್ದಿದ್ದ ಅವರನ್ನು ನೋಡಿದವರು ಹೊತ್ತುಕೊಂಡು ಬಂದಾಗ. ನೀಲಿಗಟ್ಟಿದ್ದ ಆ ಕಾಲಿನ ಮೇಲಿನ ಎರಡು ಹಲ್ಲಿನ ಗುರುತು ನೋಡಿದಾಗಲೇ ಗೊತ್ತಾಗಿದ್ದು ಕತ್ತಲ ದಾರಿಯಲ್ಲಿ ತುಳಿದ ಹಾವು ಕಚ್ಚಿ ಸತ್ತಿದ್ದರು ಎಂದು. ನೋವು ಉಂಡು ಉಂಡು ಯಾರ ಸಹಾಯವೂ ಇಲ್ಲದೇ ಹೆತ್ತ ಮಗು ಪಕ್ಕದಲ್ಲಿ ಮಲಗಿದ್ದಾಗ ಹಾಗೆ ಹೆಣವಾಗಿ ಬಂದ ಗಂಡನನ್ನು ನೋಡಲಿಕ್ಕೂ ಆಗಿರಲಿಲ್ಲ. ಸೋತು ಹೋಗಿದ್ದ ನನಗೆ ಅಳಲೂ ಆಗಿರಲಿಲ್ಲ. ಸುಸ್ತೆಲ್ಲ ಹೋಗಿ ಎದ್ದಾಗ ಅಳುತ್ತಿದ್ದ ಮಗುವನ್ನು ಸಮಾಧಾನ ಮಾಡಲೇ ನಾನೇ ಅಳುತ್ತ ಕೂರಲೇ ಆ ಅತ್ತೆಯ ಅತ್ತೆಗೂ ಹಾಗೆಯೇ ಅಂತೆ. ಮಗ ಎರಡು ವರ್ಷದವನಿರುವಾಗಲೇ ಅಪ್ಪ ತೀರಿಕೊಂಡಿದ್ದರಂತೆ. ಹಾಗಿರುವಾಗ ಈಗ ತನಗೆ ಹುಟ್ಟಿದ ಮಗುವೂ ಗಂಡೆಂದಾದಾಗ ಸಂತೋಷದ ಬೆನ್ನಿಗೇ ಹೆದರಿಕೆಯೂ ಆಗಿತ್ತು.

ಮಗ ದೊಡ್ಡವನಾದಾಗ ಮದುವೆ ಮಾಡಿದ್ದಳು ಇದೇ ವೆಂಕಮ್ಮ. ತಾನೇ ಓಡಾಡಿ ಹುಡುಕಿ ಕೊನೆಗೆ ದೂರದ ಸಂಬಂಧದಿಂದಲೇ ಒಂದು ಚಂದದ ಹುಡುಗಿಯನ್ನು ತಂದು ಮನೆ ತುಂಬಿಸಿಕೊಂಡಿದ್ದಳು. ವೆಂಕಮ್ಮನ ಮಗನೆಂದ ಕೂಡಲೇ ಕುಟುಂಬಕ್ಕಂಟಿದ ಶಾಪ ತಟ್ಟದೆ ಬಿಟ್ಟೀತೇ. ವೆಂಕಮ್ಮನನ್ನು ಅಜ್ಜಿಯನ್ನಾಗಿ ಮಾಡಿದ ಆ ಮಗ ವರ್ಷದ ಹುಟ್ಟಿದ ಹಬ್ಬವೆಂದು ದೇವಸ್ಥಾನಕ್ಕೆ ಕರೆದುಕೊಂಡು ಹೋದ ಮಗುವನ್ನು ಕೆರೆ ದಂಡೆಯ ಕೂಡ್ರಿಸಿ ಕಾಲು ತೊಳೆಯಲು ಹೋದವ ಪಾಚಿ ಕಟ್ಟಿದ ಮೆಟ್ಟಲಿನಲ್ಲಿ ಕಾಲು ಜಾರಿ ಬಿದ್ದವ ಮೇಲೆ ಬಂದದ್ದು ಹೆಣವಾಗಿಯೇ. ಅಳುವ ಮಗನೊಂದಿಗೆ ಮನೆಗೆ ಬಂದ ಹೆಣವನ್ನು ಊರವರು ಸೇರಿ ಸುಟ್ಟಿದ್ದರು. ಈಗ ಅಜ್ಜಿಯಾಗಿದ್ದ ವೆಂಕಮ್ಮ ಲಬೋ ಲಬೋ ಎಂದು ಬಾಯಿ ಬಾಯಿ ಬಡಿದುಕೊಂಡು ಅತ್ತಿದ್ದಳು. `ಯಾಕೆ ದೇವ್ರೇ... ನಮ್ಮ ಕುಟುಂಬಕ್ಕೆ ಈ ಶಾಪ... ಹಾಗಾದರೆ ಗಂಡಸರೊಬ್ಬರಿಗೂ ದೀರ್ಘಾಯುಷ್ಯ ಬರೆಯಲೇ ಇಲ್ಲವೇ.. ಹೋಗಲಿ ಸೊಸೆಯನ್ನು ತೋರಿಸುತ್ತ `ಈ ಹೆಣ್ಣು ಏನು ಮಾಡಿದೆ.. ಬಾಳಿ ಬದುಕಬೇಕಾದ ವಯಸ್ಸಿನಲ್ಲಿ ಈ ತೆರ ನರಕಕ್ಕೆ ನೂಕಿದೆಯಲ್ಲ.. ಎಂದು ಅತ್ತಿದ್ದಳು. ಅಳುವನ್ನೂ ಮರೆತಿದ್ದ ಆ ಸೊಸೆ ನಡೆದುದನ್ನು ಅರಗಿಸಿಕೊಳ್ಳುವ ಪ್ರಯತ್ನದಲ್ಲೇ ಇದ್ದಳು ಇನ್ನೂ.

ವೆಂಕಜ್ಜಿಯ ಮೊಮ್ಮಗ ದೊಡ್ಡವನಾಗಿದ್ದಾನೆ ಈಗ. ಶಾಲೆಗೆ ಹೋಗಿದ್ದಾನೆ. ಮೇಷ್ಟ್ರುಗಳು ಹೊಗಳುವಷ್ಟು ಮಾರ್ಕುಗಳನ್ನು ತೆಗೆದುಕೊಂಡು ಹೈಸ್ಕೂಲನ್ನು ಪಾಸು ಮಾಡಿದವ ದೂರದ ಕಾಲೇಜಿಗೂ ಹೋಗಿದ್ದಾನೆ. ಹಾಗೆ ಕಾಲೇಜಿಗೆ ಹೋಗುತ್ತಿದ್ದ ದಿನಗಳಲ್ಲಿ ಸುರು ಸುರುವಿಗೆ ರಜೆಗೆಂದು ಊರಿಗೆ ಬಂದಾಗ ಅಜ್ಜಿಗೆ ಅರ್ಥವಾಗದ ಏನೇನೋ ಮಾತುಗಳನ್ನು ಹೇಳಿ ಹೆದರಿಸುತ್ತಿದ್ದ. ಅಲ್ಲಿಯವರೆಗೆ ಸಮನಾಗಿ ಪಂಚೆಯನ್ನೂ ಉಟ್ಟುಕೊಳ್ಳದ ಗಂಡಸರನ್ನೇ ಕಂಡಿದ್ದ ಆ ಮುದುಕಿಗೆ ಎರಡೂ ಕಾಲಿಗೆ ಇಜಾರನ್ನು ಹಾಕಿಕೊಂಡು ಬಂದ ಮೊಮ್ಮಗನನ್ನು ನೋಡಿದ್ದೇ ಸಂಭ್ರಮ. ಅವ ಹೇಳಿದ್ದು ಅರ್ಥವಾಗಲಿ ಬಿಡಲಿ ಅದನ್ನು ಬಿಟ್ಟ ಬಾಯಿ ಬಿಟ್ಟಂತೆ ಕೇಳುವುದೇ ಆನಂದ. `ಏನೆಲ್ಲ ಕಲಿತಿದೆಯಲ್ಲ ಮಗು.. ಎಂದು ಸೊಸೆಯೊಂದಿಗೆ ಹೇಳಿಕೊಳ್ಳುತ್ತಿದ್ದಳು. ಜೊತೆಗೆ `ಇಷ್ಟೆಲ್ಲ ಮಾತನಾಡುವುದು ನೋಡಿದರೆ ಮಗು ಮಾಷ್ಟ್ರಾದರೂ ಆದೀತು ಎನ್ನುತ್ತಿದ್ದಳು. ಆ ಸೊಸೆಗೇನು ಗೊತ್ತಾಗುತ್ತದೆ. ಚಿಕ್ಕ ವಯಸ್ಸಿನಲ್ಲೇ ಗಂಡನನ್ನು ಕಳೆದುಕೊಂಡು ಸಮಾಜದ ಒಳಸುತ್ತಿನಿಂದ ಹೊರಗೇ ಉಳಿದು ತನಗೊಂದು ಅಸ್ತಿತ್ವ ಇದೆಯೆಂಬುದರ ಅರಿವೂ ಇಲ್ಲದೆ ಬದುಕುತ್ತಿದ್ದ ಅವಳಿಗೆ ಇದೆಲ್ಲ ಎಲ್ಲಿ ತಿಳಿಯುತ್ತದೆ. ಸೊಸೆಯಂತೆಯೇ ವಿಧವೆಯಾಗಿದ್ದರೂ ಸಾಕಷ್ಟು ಬಾಯಿ ಬೆಳೆಸಿಕೊಂಡಿದ್ದ ವೆಂಕಜ್ಜಿಗೇನೂ ಅಂತಹ ನೋವು ಕಾಡಿರಲಿಲ್ಲ. ಅಥವಾ ಕಾಡಿದ್ದರೂ ಬಾಯಿ ಮಾಡುವುದರ ಮೂಲಕ ಅದನ್ನು ಮರೆಯುವ ದಾರಿಯನ್ನು ಕಂಡುಕೊಂಡಿರಲಿಕ್ಕೂ ಸಾಕು. ಆದರೆ ಈ ಪಾಪದ ಸೊಸೆಗೆ ಅದೆಲ್ಲ ಎಲ್ಲಿ ಬರಬೇಕು. ಜೋರಾಗಿ ಬಾಯಿ ಮಾಡುವವರೆದುರಿಗೆ ಮೂಕ ಹಸು ಆಕೆ. ಈ ಅತ್ತೆಯಲ್ಲದಿದ್ದರೆ ಗಂಡಸರ ಬಲವೇ ಇಲ್ಲದ ಆಕೆಯನ್ನು ಜನ ಹರಿದು ಮುಕ್ಕಿಯೇ ಬಿಡುತ್ತಿದ್ದರೋ ಏನೋ. ಅಂತಹವಳಿಗೆ ಮಗ